<u>**3** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು</u>

<u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ</u>

**<u>C.C. No.2583/2023</u>**

**CW- 3** **PW: 3**

| | |
|---|---|
| ಸಾಕ್ಷಿಯ ಹೆಸರು | ಃ ಶ್ರೀಧರ ಚಂದ್ರಗಿರಿ |
| ತಂದೆ /ಗಂಡನ ಹೆಸರು | ಃ ಪುಂಡಲಿಕ |
| ವಯಸ್ಸು | ಃ 40 ವರ್ಷ |
| ಉದ್ಯೋಗ | ಃ ಬ್ಯಾಂಕ್ ವ್ಯವಸ್ಥಾಪಕರು |
| ವಾಸಸ್ಥಳ | ಃ ಸಿದ್ದರಾಮೇಶ್ವರ ನಗರ ಹುಬ್ಬಳ್ಳಿ |

ದಿಃ **13.08.2024.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ ಃ

ಸಾಕ್ಷಿಗೆ ನಿಪಿ.11 ಪಂಚನಾಮೆ ತೋರಿಸಲಾಗಿ ಅದರಲ್ಲಿ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.11(ಸಿ) ಎಂದು ಗುರುತಿಸಲಾಯಿತು. ದಿಃ 16.04.2022 ರಂದು ಪೊಲಿಸರು ನನ್ನನ್ನು ಆರ್ ಟಿ ಓ ಕಚೇರಿಗೆ ಕರೆದುಕೊಂಡು ಹೋಗಿ ಅಲ್ಲಿ ಬೆಳಿಗ್ಗ 11.30 ರಿಂದ 12.30 ಗಂಟೆಯವರೆಗೆ ಪಂಚನಾಮೆ ಜರುಗಿಸಿರುತ್ತಾರೆ. ಸದರಿ ಸಮಯದಲ್ಲಿ ನನ್ನ ಜೊತೆ ಶೇಖರಪ್ಪ ಮಸ್ತಿ ಸಹ ಇದ್ದರು. ಘಟನಾ ಸ್ಥಳವನ್ನು ಚಾಸಾಃ1 ಶ್ರೀನಿವಾಸ ಕಟಾರೆ ರವರು ಪೊಲಿಸರಿಗೆ ತೋರಿಸಿರುತ್ತಾರೆ. ನಿಪಿ.12 ಪೋಟೊದಲ್ಲಿ ನಾನು ಇದ್ದೇನೆ. ಪಂಚನಾಮೆ ಸಮಯದಲ್ಲಿ ಸದರಿ ಪೋಟೊ ತೆಗೆದಿರುತ್ತದೆ. ಎನ್ ಓ ಸಿ ಪೊರ್ಜರಿ ಆದ ಕಾರಣ ನಮ್ಮನ್ನು ಕರೆದುಕೊಂಡು ಹೋಗಿ ಪಂಚನಾಮೆ ಜರುಗಿಸಿರುತ್ತದೆ.

ಪಾಟಿಸವಾಲುಃ ಆರೋಪಿ ನಂ.**1** ಪರ ಶ್ರೀ ಎನ್ ಎಮ್ ಪಿ ಪರ ವಕೀಲರಿಂದಃ

ನಾನು ಇಂಡೊಸ್ಟಾರ್ ಕ್ಯಾಪಿಟಲ್ ಫೈನನ್ಸ ಲಿಮಿಟೆಡ್ ನಲ್ಲಿ ಕ್ರೆಡಿಟ ಮ್ಯಾನೇಜರ್ ಆಗಿದ್ದೇನೆ. ಸದರಿ ಕಂಪನಿ ಪಬ್ಲಿಕ್ ಲಿಮಿಟೆಡ್ ಆಗಿರುತ್ತದೆ. ಸದರಿ ಕಂಪನಿಗೆ ಎಷ್ಟು ಜನ ಡೈರೆಕ್ಟರ್ಸ ಇದ್ದಾರೆಂದು ನನಗೆ ಗೊತ್ತಿಲ್ಲ. ಪೊಲಿಸರು ನನ್ನನ್ನು ಕರೆದುಕೊಂಡು ಹೋಗಿದ್ದಕ್ಕೆ ಮಾತ್ರ ನಾನು ಪಂಚನಾಮೆಗೆ ಸಹಿ ಮಾಡಿರುತ್ತೇನೆ ಹಾಗೂ ಆ ಬಗ್ಗ ನನಗೆ ಯಾವದೇ ಮಾಹಿತಿ ಇಲ್ಲ ಎಂದರೆ ಸಾಕ್ಷಿ ನಾನು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರಿಂದ ನನಗೆ ಮಾಹಿತಿ ಇದೆ ಎಂದು ನುಡಿಯುತ್ತಾರೆ.

ಪಾಟಿಸವಾಲುಃ ಆರೋಪಿ ನಂ.**2** ಪರ ಶ್ರೀ ಬಿ ಆರ್ ಎಮ್ ಪರ ವಕೀಲರಿಂದಃ

ಪಂಚನಾಮೆಗೆ ಬರಲು ಪೊಲಿಸರು ನನಗೆ ನೊಟೀಸು ನೀಡಿರಲಿಲ್ಲ. ಆ ದಿನ 2 ಪೊಟೊಗಳನ್ನು ತೆಗೆದಿರುವುದು ನೆನಪಿದೆ. ಒಂದು ಪೊಟೊ ಆರ್ ಟಿ ಓ ಕಚೇರಿ ಹೊರಗಡೆ ಹಾಗೂ ಇನ್ನೊಂದು ಪೊಟೊ ಆರ್ ಟಿ ಓ ಕಚೇರಿ ಒಳಗಡೆ ತೆಗೆದಿರುತ್ತಾರೆ. ಆರ್ ಟಿ ಓ ಕಚೇರಿ ಒಳಗಡೆ ಹೋಗಬೇಕಾದರೆ ಸಾಕಷ್ಟು ಕ್ಯಾಬಿನ್ ಗಳು ಇವೆ ಎಂದರೆ ಸರಿ. ನನಗೆ ಯಾವ ಕ್ಯಾಬಿನ ನಲ್ಲಿ ನಿಲ್ಲಿಸಿ ಪೊಟೊ ತೆಗೆದಿರುತ್ತಾರೆ ಎಂದು ನೆನಪಿಲ್ಲ. ನಾನು ಪೊಟೊ ತೆಗೆದ ಕ್ಯಾಬಿನನಲ್ಲಿ 5 ರಿಂದ 10 ನಿಮಿಷಗಳವರೆಗೆ ಇದ್ದೆನು. ಆರ್ ಟಿ ಓ ಕಚೇರಿ ಹೊರಗಡೆ ಪೊಟೊ ತೆಗೆದಾಗ ಅಲ್ಲಿ ನಾನು ಸುಮಾರು 5 ನಿಮಿಷಗಳವರೆಗೆ ಇದ್ದೆನು. ಪೊಟೊಗಳನ್ನು ತೆಗೆದ ನಂತರ ನಾನು ನನ್ನ ಕಚೇರಿಗೆ ಮರಳಿರುತ್ತೇನೆ. ಆಗ ಮದ್ಯಾಹ್ನ ಸುಮಾರು 1.00 ಗಂಟೆ ಆಗಿತ್ತು. ಈ ಪ್ರಕರಣಕ್ಕೆ ಸಂಬಂದಿಸಿದಂತೆ ನಾನು ಸಾಕ್ಷಿಯಾಗಿ ಒಂದು ಸಹಿ ಮಾಡಿರುತ್ತೇನೆ. ಅದೇ ರೀತಿ ನನ್ನ ಸಹಿ ವೆರಿಫಿಕೇಷನ್ ಗೋಸ್ಕರ ಸಹ ನನ್ನ ಸಹಿಗಳನ್ನು ಪಡೆದಿರುತ್ತಾರೆ. ಮಾದರಿ ಸಹಿಗಳನ್ನು ಪೊಲಿಸ್ ಠಾಣೆಯಲ್ಲಿ ಪಡೆದಿರುತ್ತಾರೆ. ಪಂಚನಾಮೆ ಬರೆಯುವ ಬಗ್ಗೆ ನನಗೆ ಅನುಭವ ಇರುವುದಿಲ್ಲ, ನಿಪಿ.11 ದಾಖಲೆಯನ್ನು ನಾನು ಹೇಳಿ ಬರೆಯಿಸಿಲ್ಲ. ದಿಃ 16.04.2022 ರಂದು ನಿಪಿ.11 ಪಂಚನಾಮೆ ಬರೆದಿರುತ್ತಾರೆ. ಅದನ್ನು ಪೋಲಿಸರು ತಯಾರಿಸಿರುತ್ತಾರೆ. ಸದರಿ ಪೊಲಿಸರ ಹೆಸರು ಗೊತ್ತಿಲ್ಲ. ಚಾಸಾಃ 2 ನನಗೆ ಪರಿಚಯ ಅವರು ನಮ್ಮ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಚಾಸಾಃ 1 ನನ್ನ ಮೇಲಾಧಿಕಾರಿ. ನನಗೆ ಪೊಟೊ ತೆಗೆದ ವಿಷಯ ಮಾತ್ರ ಗೊತ್ತು ಹಾಗೂ ನಿಪಿ.11 ರಲ್ಲಿರುವ ವಿಷಯ ಗೊತ್ತಿಲ್ಲ ಆದರೂ ನಾನು ಗಿಳಿ ಪಾಠ ಮಾಡಿಕೊಂಡು ಬಂದು ದಿನಾಂಕ ಮತ್ತು ಸಮಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಎನ್ ಓ ಸಿ ಫೋರ್ಜರಿ ಆಗಿದೆ ಎಂದು ನಾನು ಹೇಳಿದ್ದು ಸದರಿ ಎನ್ ಓ ಸಿ ಯನ್ನು ನಾನು ನೋಡಿರುವುದಿಲ್ಲ. ಎನ್ ಓ ಸಿ ಫೋರ್ಜರಿ ಮಾಡಿರುತ್ತಾರೆಂದು ನನ್ನ ಮೇಲಾಧಿಕಾರಿ ನನಗೆ ಹೇಳಿರುತ್ತಾರಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲಿಸರು ನನ್ನ ಸಮಕ್ಷಮ ಯಾವದೇ ಪಂಚನಾಮೆ ಜರುಗಿಸಿಲ್ಲ ಹಾಗೂ ನಾನು ಹೇಳಿದ ಹಾಗೆ ಯಾವದೇ ಪೊಟೊ ತೆಗೆದಿಲ್ಲ ಎಂದರೆ ಸರಿಯಲ್ಲ.

ಪಾಟಿಸವಾಲು ಇರುವುದಿಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ.

Sd/-
**(**ಶ್ರೀಮತಿ ದೀಪಾ ಜಿ ಮನೇರಕರ**)**
**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ**.**